ಕರ್ನಾಟಕ ಸರ್ಕಾರ

**Govt.of Karnataka**

**ಜಿಲ್ಲಾಧಿಕಾರಿಗಳ ಕಾರ್ಯಾಲಯ, ಧಾರವಾಡ ಜಿಲ್ಲೆ, ಧಾರವಾಡ-580 001**

**OFFICE OF THE DEPUTY COMMISSIONER, DHARWAD DISTRICT, DHARWAD-580 001**

ದೂರವಾಣಿ / Telephone: 0836-2233840, 2233880

ಫ್ಯಾಕ್ಸ್: / FAX: 0836- 2747102

E-mail : deo.dharwad@gmail.com

ನಂ.ಎಲ್ಎನ್ಎ/ಸಿಆರ್-139/2017-18 ದಿನಾಂಕ:29-01-2018

## ಅನುಬಂಧ-5:

## ಅಧಿಕೃತ ಜ್ಞಾಪನ

ವಿಷಯ:- **ಧಾರವಾಡ ಜಿಲ್ಲೆ, ಹುಬ್ಬಳ್ಳಿ** ತಾಲೂಕು, **ಹುಬ್ಬಳ್ಳಿ** ಹೋಬಳಿ, **ರೇವಡಿಹಾಳ** ಗ್ರಾಮದ ಬ್ಲಾಕ್ ನಂಬರ: **90** ಕ್ಷೇತ್ರ **12ಎಕರೆ 30ಗುಂಟೆ 00ಆಣೆ ಪೈಕಿ (ಪೂರ್ವ ಭಾಗದ)** ಕ್ಷೇತ್ರ **09ಎಕರೆ 30ಗುಂಟೆ 00ಆಣೆ** ವಿಸ್ತೀರ್ಣದ ವ್ಯವಸಾಯದ ಜಮೀನನ್ನು ವ್ಯವಸಾಯೇತರ **ವಸತಿ** ಉದ್ದೇಶಕ್ಕಾಗಿ ಭೂ ಪರಿವರ್ತನೆ ಮಾಡುವ ಕುರಿತು.

ಉಲ್ಲೇಖ:-
1. ಕರ್ನಾಟಕ ಭೂ ಕಂದಾಯ ಕಾಯ್ದೆ, 1964 ಕಲಂ 95(2)
2. ಸರಕಾರದ ಸುತ್ತೋಲೆ ಕ್ರ:ಆರ್‌ಡಿ/56/ಎಲ್‌ಜಿಪಿ/2008, ದಿ.10-09-2008
3. ಸರಕಾರದ ಸುತ್ತೋಲೆ ಕ್ರ:ಆರ್‌ಡಿ/07/ಎಲ್‌ಜಿಪಿ/1995, ದಿ.07-06-1999
4. ಸರಕಾರದ ಸುತ್ತೋಲೆ ಕ್ರ:ಆರ್‌ಡಿ/125/ಎಲ್‌ಜಿಬಿ/2013, ದಿ.23-01-2014
5. **1)ಶ್ರೀಮತಿ ಪಾರವ್ವ ಕೋಂ ಕರಿಯಪ್ಪ ಮೇತ್ರಿ, 2)ಶ್ರೀಪರಸಪ್ಪ ತಂದೆ ಕರಿಯಪ್ಪ ಮೇತ್ರಿ 3) ಶ್ರೀ ದುರಗಪ್ಪ ತಂದೆ ಮಲ್ಲಪ್ಪ ಮೇತ್ರಿ, 4)ಶ್ರೀ ಫಕ್ಕೀರಪ್ಪ ತಂದೆ ಮಲ್ಲಪ್ಪ ಮೇತ್ರಿ 5) ಶ್ರೀ ಮಂಜುನಾಥ ತಂದೆ ಕರಿಯಪ್ಪ ಮೇತ್ರಿ, ಸಾ: ಹರಿಜನ ಓಣಿ, ರೇವಡಿಹಾಳ, ತಾ:ಹುಬ್ಬಳ್ಳಿ** ಇವರ ಅರ್ಜಿ ದಿನಾಂಕ:**31-10-2017.**
6. ತಹಶೀಲದಾರ, ಹುಬ್ಬಳ್ಳಿ ಇವರ ವರದಿ ಸಂಖ್ಯೆ ಎಲ್ಎನ್ಎ/ಸಿಆರ್-74/ **2017-18** ದಿನಾಂಕ: **21-11-2017.**
7. ಹೆಚ್ಚುವರಿ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಧಾರವಾಡ ಇವರ ವರದಿ ಸಂಖ್ಯೆ ನಗ್ರಾಯೋ/ವ.ಕ.ಧಾ/03/ಭೂ.ಪ-80/2017-18/3068-70 ದಿನಾಂಕ:05-12-2017.

**ಪ್ರಸ್ತಾವನೆ:**

**1)ಶ್ರೀಮತಿ ಪಾರವ್ವ ಕೋಂ ಕರಿಯಪ್ಪ ಮೇತ್ರಿ, 2)ಶ್ರೀಪರಸಪ್ಪ ತಂದೆ ಕರಿಯಪ್ಪ ಮೇತ್ರಿ 3) ಶ್ರೀ ದುರಗಪ್ಪ ತಂದೆ ಮಲ್ಲಪ್ಪ ಮೇತ್ರಿ, 4)ಶ್ರೀ ಫಕ್ಕೀರಪ್ಪ ತಂದೆ ಮಲ್ಲಪ್ಪ ಮೇತ್ರಿ 5) ಶ್ರೀ ಮಂಜುನಾಥ ತಂದೆ ಕರಿಯಪ್ಪ ಮೇತ್ರಿ, ಸಾ: ಹರಿಜನ ಓಣಿ, ರೇವಡಿಹಾಳ, ತಾ:ಹುಬ್ಬಳ್ಳಿ** ಇವರು ದಿನಾಂಕ:**31-10-2017** ರಂದು **ಧಾರವಾಡ ಜಿಲ್ಲೆ, ಹುಬ್ಬಳ್ಳಿ** ತಾಲೂಕು, **ಹುಬ್ಬಳ್ಳಿ** ಹೋಬಳಿ, **ರೇವಡಿಹಾಳ** ಗ್ರಾಮದ ಬ್ಲಾಕ್ ನಂಬರ: **90** ಕ್ಷೇತ್ರ **12ಎಕರೆ 30ಗುಂಟೆ 00ಆಣೆ ಪೈಕಿ (ಪೂರ್ವ ಭಾಗದ)** ಕ್ಷೇತ್ರ **09ಎಕರೆ 30ಗುಂಟೆ 00ಆಣೆ** ವಿಸ್ತೀರ್ಣದ ವ್ಯವಸಾಯದ ಜಮೀನನ್ನು ವ್ಯವಸಾಯೇತರ **ವಸತಿ** ಉದ್ದೇಶಕ್ಕಾಗಿ ಭೂ ಪರಿವರ್ತನೆ ಮಾಡಲು ಕೋರಿರುತ್ತಾರೆ.

ಪ್ರಕರಣದಲ್ಲಿ ತಹಶೀಲದಾರ, **ಹುಬ್ಬಳ್ಳಿ** ಹಾಗೂ **ಹೆಚ್ಚುವರಿ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಧಾರವಾಡ** ಇವರಿಗೆ ಸ್ಥಳ ಪರಿಶೀಲನೆಯಿಂದ ದಾಖಲೆಗಳೊಂದಿಗೆ ಅಭಿಪ್ರಾಯ ವರದಿ ಸಲ್ಲಿಸಲು ಕೋರಲಾಗಿತ್ತು.

ತಹಶೀಲದಾರ, **ಹುಬ್ಬಳ್ಳಿ** ಇವರು ಉಲ್ಲೇಖ (6)ರಲ್ಲಿ ದಿನಾಂಕ:**21-11-2017**ರ ತಮ್ಮ ವರದಿಯಲ್ಲಿ **ವಸತಿ** ಉದ್ದೇಶಕ್ಕಾಗಿ ಭೂ ಪರಿವರ್ತನೆ ಮಾಡಬಹುದಾಗಿದೆ ಅಂತಾ ಅಭಿಪ್ರಾಯ ನೀಡಿರುತ್ತಾರೆ.

**ಹೆಚ್ಚುವರಿ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಧಾರವಾಡ** ಇವರು ಉಲ್ಲೇಖ (7) ರ ತಮ್ಮ ವರದಿಯಲ್ಲಿ **ವಸತಿ** ಉದ್ದೇಶಕ್ಕಾಗಿ ಭೂ ಪರಿವರ್ತನೆ ಮಾಡಬಹುದಾಗಿದೆ ಅಂತಾ ಅಭಿಪ್ರಾಯ ನೀಡಿರುತ್ತಾರೆ.

ಪ್ರಕರಣದಲ್ಲಿನ ದಾಖಲೆಗಳನ್ನು ಹಾಗೂ ಸಂಬಂಧಿಸಿದ ಅಧಿಕಾರಿಗಳ ಅಭಿಪ್ರಾಯ ವರದಿ ಪರಿಶೀಲಿಸಿದ ನಂತರ ಅರ್ಜಿದಾರರಿಗೆ ಭೂ ಪರಿವರ್ತನಾ ಶುಲ್ಕ **ರೂ.3,18,630-00** ಪೋಡಿ ಶುಲ್ಕ **ರೂ.13,650-00** ಒಟ್ಟು **ರೂ.3,32,280-00** ಭರಣಾ ಮಾಡುವಂತೆ ಅನುಬಂಧ-3 ರಲ್ಲಿ ತಿಳುವಳಿಕೆ ಪತ್ರ ನೀಡಿದ್ದು ಇರುತ್ತದೆ. ಅದರನ್ವಯ ಅರ್ಜಿದಾರರು ಪೂರ್ಣ ಶುಲ್ಕವನ್ನು ಚಲನ ನಂ. **15 ದಿನಾಂಕ:04-01-2018** ರ ಮೂಲಕ ಸರಕಾರಕ್ಕೆ ಭರಣಾ ಮಾಡಿ ಚಲನ ಮತ್ತು ಕರಾರು (ಅನುಬಂಧ-4) ಗಳನ್ನು ತಹಶೀಲದಾರ, **ಹುಬ್ಬಳ್ಳಿ** ರವರ ಮೂಲಕ ಸಲ್ಲಿಸಿರುತ್ತಾರೆ. ಕಾರಣ ಈ ಕೆಳಗಿನಂತೆ ಆದೇಶ ಮಾಡಿದೆ.

## ಆದೇಶ

ನಂ.ಎಲ್ಎನ್ಎ/ಸಿಆರ್-~~96~~/2017-18 131 ದಿನಾಂಕ: -12-2017 29-01-2018

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆಯಲ್ಲಿ **ಧಾರವಾಡ** ಜಿಲ್ಲೆ, **ಹುಬ್ಬಳ್ಳಿ** ತಾಲೂಕು, **ಹುಬ್ಬಳ್ಳಿ** ಹೋಬಳಿ, **ರೇವಡಿಹಾಳ** ಗ್ರಾಮದ ಬ್ಲಾಕ್ ನಂಬರ: **90** ಕ್ಷೇತ್ರ **12ಎಕರೆ 30ಗುಂಟೆ 00ಆಣೆ ಪೈಕಿ (ಪೂರ್ವ ಭಾಗದ) ಕ್ಷೇತ್ರ 09ಎಕರೆ 30ಗುಂಟೆ 00ಆಣೆ** ವಿಸ್ತೀರ್ಣದ ವ್ಯವಸಾಯದ ಜಮೀನನ್ನು ವ್ಯವಸಾಯೇತರ **ವಸತಿ** ಉದ್ದೇಶಕ್ಕಾಗಿ ಈ ಕೆಳಗೆ ಕಾಣಿಸಿದ ಶರ್ತುಗಳನ್ನು ವಿಧಿಸಿ ಭೂ ಪರಿವರ್ತನೆಗೆ ಆದೇಶಿಸಿದೆ.

**ಶರ್ತುಗಳು:**

1. ಈ ಭೂಮಿಯು ಯಾವ ಉದ್ದೇಶಕ್ಕಾಗಿ ಪರಿವರ್ತನೆಯಾಗಿದೆಯೋ ಆ ಉದ್ದೇಶಕ್ಕೆ ಉಪಯೋಗಿಸಿಕೊಳ್ಳಲು ಸಕ್ಷಮ ಪ್ರಾಧಿಕಾರಿಯಿಂದ ಅಂದರೆ ಹು.ಧಾ.ನ.ಪ್ರಾ/ನಗರ ಯೋಜನಾ ಮತ್ತು ಗ್ರಾಮಾಂತರ ಯೋಜನಾ ಇಲಾಖೆ/ನಗರಸಭೆ/ಪುರಸಭೆ/ಪಟ್ಟಣ ಪಂಚಾಯತಿ/ ಗ್ರಾಮ ಪಂಚಾಯತಿ/ ಮಾಲಿನ್ಯ ನಿಯಂತ್ರಣ ಮಂಡಳಿಗಳಿಂದ ಮಂಜೂರಾತಿಯನ್ನು ಪಡೆಯದ ಹೊರತು ಈ ಆದೇಶವು ಅನುಭವದಾರರಿಗೆ ಯಾವುದೇ ಹಕ್ಕು ನೀಡುವದಿಲ್ಲ.
2. ಭೂ ಪರಿವರ್ತನೆ ಜಮೀನನ್ನು **ವಸತಿ** ಉದ್ದೇಶಕ್ಕಾಗಿ ಮಾತ್ರ ಉಪಯೋಗಿಸಿಕೊಳ್ಳತಕ್ಕದ್ದು. ಈ ಜಮೀನನ್ನು ಪೂರ್ವಾನುಮತಿ ಇಲ್ಲದೇ ಬೇರೆ ಉದ್ದೇಶಕ್ಕಾಗಿ ಉಪಯೋಗಿಸಿಕೊಳ್ಳಬಾರದು.
3. ಈ ಜಮೀನಿನಲ್ಲಿ ಉದ್ದೇಶಿಸಿರುವ ಬಡಾವಣೆ ನಕ್ಷೆ ಹಾಗೂ ಪರವಾನಿಗೆ ಇತ್ಯಾದಿಗಳನ್ನು **ಹೆಚ್ಚುವರಿ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಧಾರವಾಡ** (ಪ್ರಾಧಿಕಾರ/ನಗರ ಯೋಜನಾ ಸಹಾಯಕ ನಿರ್ದೇಶಕರು/ಇತ್ಯಾದಿ) ರವರಿಂದ ಅನುಮೋದಿಸಿಕೊಂಡು ಆ ನಂತರ ಅನುಮೋದಿತಗೊಂಡ ನಕ್ಷೆಗೆ ಅನುಗುಣವಾಗಿ ಕಟ್ಟಡಗಳನ್ನು ಕಟ್ಟುವುದು ಮತ್ತು ಸದರಿ ಜಮೀನಿನಲ್ಲಿ ಲೇಔಟ ಪ್ಲಾನಿಗೆ ಅನುಮೋದನೆ ಪಡೆಯದೆ ಪರಭಾರೆ ಮಾಡಕೂಡದು.
4. ಇತರ ಅವಶ್ಯಕವಾದ ರಸ್ತೆ ಜಾಗ, ರಸ್ತೆ ಮಾರ್ಜಿನ ಖಾಲಿ ಜಾಗ, ಇತ್ಯಾದಿಗಳನ್ನು **ಹೆಚ್ಚುವರಿ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಧಾರವಾಡ** (ಪ್ರಾಧಿಕಾರ/ನಯೋಸನಿಧಾ/ ಇತ್ಯಾದಿ) ರವರಿಂದ ಅನಮೋದಿಸಲ್ಪಟ್ಟ ಬಡಾವಣೆ ನಕ್ಷೆ ಪ್ರಕಾರ ಹಾಗೂ ನಿರ್ಧಿಷ್ಟ ಪಡಿಸಿದ ನಿಯಮಗಳ ರೀತ್ಯ ಸದರಿ ಉದ್ದೇಶಕ್ಕಾಗಿ ಕಾಯ್ದಿರಿಸತಕ್ಕದ್ದು.
5. ಸಾರ್ವಜನಿಕ ಹಿತದ ದೃಷ್ಟಿಯಿಂದ ಸದರಿ ಜಮೀನಿನಲ್ಲಿ ನಿವೇಶನದಾರರಿಗೆ ನಾಗರಿಕ ಸೌಲಭ್ಯಗಳಾದ ವಿದ್ಯುತ್‌ಚ್ಛಕ್ತಿ, ನೀರು ಸರಬರಾಜು, ಒಳಚರಂಡಿ ವ್ಯವಸ್ಥೆ ಇತ್ಯಾದಿಗಳನ್ನು ಆರೋಗ್ಯ ನೈರ್ಮಲೀಕರಣ ಹಾಗೂ ಭದ್ರತೆಗಳ ಉದ್ದೇಶದಿಂದ ಈ ಎಲ್ಲ ಸೌಲಭ್ಯಗಳನ್ನು ಕಾನೂನು ರೀತ್ಯ ಒದಗಿಸಿ ಕೊಡುವದು ಅರ್ಜಿದಾರರ ಜವಾಬ್ದಾರಿಯಾಗಿರುತ್ತದೆ.
6. ಈ ಜಮೀನಿಗೆ ತಾಕು ಪೋಟ್ ಖರಾಬ್ ಜಮೀನು ಇದ್ದಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆ, 1964ರ ಕಲಂ 67 ರಂತೆ ಸರ್ಕಾರದ ಉದ್ದೇಶಕ್ಕಾಗಿ ಕಾಯ್ದಿರಿಸತಕ್ಕದ್ದು, "ಬ" ಖರಾಬ ವಿಸ್ತೀರ್ಣದ ಮೇಲೆ ಅರ್ಜಿದಾರಿಗೆ ಯಾವುದೇ ಹಕ್ಕು ಇರುವುದಿಲ್ಲ. ಈ "ಬ" ಖರಾಬಿನ ವಿಸ್ತೀರ್ಣದ ಹಕ್ಕು ಯಾವಾಗಲೂ ಸರ್ಕಾರಕ್ಕೆ ಸೇರಿರುತ್ತದೆ. ತಹಶೀಲ್ದಾರರು ಈ ಬಾಬ್ತು ಆರ್.ಟಿ.ಸಿ.ಯಲ್ಲಿ ಸ್ಪಷ್ಟವಾಗಿ ನಮೂದಿಸತಕ್ಕದ್ದು.
7. ಅ) ಸರಕಾರದ ಆದೇಶ ಕ್ರ: ಪಿಡಬ್ಲ್ಯೂಪಿ/362/ಸಿಆರ್ಎಂ/98 ದಿನಾಂಕ 09-10-1998 ರಂತೆ ಈ ಜಮೀನಿನಲ್ಲಿ ಕಟ್ಟಲು ಉದ್ದೇಶಿಸಿರುವ ಕಟ್ಟಡವು,-

**ರಾಷ್ಟ್ರೀಯ ಹೆದ್ದಾರಿಗಳಿಗೆ** ಸಂಬಂಧಿಸಿದಂತೆ **ಪಟ್ಟಣ ಹಾಗೂ ಶಹರ ಪ್ರದೇಶದಲ್ಲಿ** ರಸ್ತೆ ಮಧ್ಯ ಬಾಗದಿಂದ **21 ಮೀಟರ್** ಹಾಗೂ **ನಗರ ಹೊರ ವಲಯದಲ್ಲಿ 40 ಮೀಟರ್.**

**ರಾಷ್ಟ್ರೀಯ ಹೆದ್ದಾರಿ ನಂಬರ 4** ಕ್ಕೆ ಸಂಬಂಧಿಸಿದಂತೆ ರಸ್ತೆ ಮಧ್ಯ ಭಾಗದಿಂದ **75 ಮೀಟರ್.**

**ಜಿಲ್ಲಾ ಮುಖ್ಯ ರಸ್ತೆಗೆ** ಸಂಬಂಧಿಸಿದಂತೆ ರಸ್ತೆ ಮಧ್ಯ ಭಾಗದಿಂದ **25 ಮೀಟರ್** ಅಂತರವನ್ನು ಕಾಯ್ದಿರಿಸಬೇಕು.

ಬ) ಲೋಕೋಪಯೋಗಿ ಇಲಾಖೆಯ ಪ್ರಕಟಣೆ ಸಂಖ್ಯೆ ಪಿಡಬ್ಲ್ಯೂಡಿ:23:ಆರ್‌ಡಿಎಫ್: 2004 ದಿನಾಂಕ 18–10–2004 ರಲ್ಲಿ ಕಾಣಿಸಿರುವ ಕಟ್ಟಡ ರೇಖೆಗಳ ಅಂತರವನ್ನು ಪರಿಷ್ಕರಿಸಿ ಅದರಂತೆ ಸರಕಾರದ ಸುತ್ತೋಲೆ ಸಂಖ್ಯೆ ಆರ್‌ಡಿ/125/ಎಲ್‌ಜಿಜಿ/2013 ದಿನಾಂಕ 23–01–2014 ರನ್ವಯ **ರಾಜ್ಯ ಹೆದ್ದಾರಿಗೆ** ಸಂಬಂಧಿಸಿದಂತೆ ಅಂತರವನ್ನು ಪರಿಷ್ಕರಿಸಿದ್ದು–

**ನಗರ ಪಾಲಿಕೆ / ನಗರ ಸಭೆ/ ಪುರಸಭೆ/ ಪಟ್ಟಣ ಪಂಚಾಯತಿ/ ಗ್ರಾಮ ಪಂಚಾಯತಿ** ಪರಿಮಿತಿಯಲ್ಲಿ ರಾಜ್ಯ ಹೆದ್ದಾರಿಯ ದಾಖಲಿತ ರಸ್ತೆ ಭೂ ಗಡಿಯ ಅಂಚಿನಿಂದ **6 ಮೀಟರ್** ಅಂತರವಲ್ಲಿ ಹಾಗೂ ನಗರ ಪಾಲಿಕೆ ಪರಿಮಿತಿಯಿಂದ 15 ಕಿ.ಮೀ. ದೂರದವರೆಗೆ ರಾಜ್ಯ ಹೆದ್ದಾರಿಯ ದಾಖಲಿತ ರಸ್ತೆ ಭೂ ಗಡಿಯ ಅಂಚಿನಿಂದ **12 ಮೀಟರ್** ಅಂತರವನ್ನು ಕಾಯ್ದಿರಿಸಬೇಕು. ಈ ಪ್ರದೇಶದಲ್ಲಿ ಯಾವುದೇ ಕಟ್ಟಡವನ್ನು ಕಟ್ಟಬಾರದು.

ಕ) ಖಂಡಿಕೆ 7 (ಬ) ರಲ್ಲಿ ತಿಳಿಸಿರುವ ಪ್ರದೇಶಗಳನ್ನು ಹೊರತು ಪಡಿಸಿ, ಉಳಿದ ಅಕ್ಷೇಪಿತ ಪ್ರದೇಶಗಳಲ್ಲಿ ಈಗಾಗಲೇ **ಕರ್ನಾಟಕ ಹೆದ್ದಾರಿ ಕಾಯ್ದೆ, 1964 ರ ಅಧಿನಿಯಮ** 7(1) ರನ್ವಯ ಹೊರಡಿಸಲಾದ ಪ್ರಕಟಣೆಯಲ್ಲಿ ವಿಧಿಸಿರುವ ಗಡಿ ರೇಖೆ, ಕಟ್ಟಡ ರೇಖೆ ಮತ್ತು ನಿಯಂತ್ರಣ ರೇಖೆಗಳು ಅನ್ವಯವಾಗುತ್ತವೆ.

8. ಈ ಜಮೀನಿನಲ್ಲಿ ಉದ್ದೇಶಿಸಿರುವ ಬಡಾವಣೆಗೆ ಹೋಗಲು ಸಂಪರ್ಕ ರಸ್ತೆಯನ್ನು ಅನುಮೋದಿತ ಬಡಾವಣೆಯ ನಕ್ಷೆಯಲ್ಲಿ ಇರುವ ರೀತಿಯೇ ನಿರ್ಮಿಸತಕ್ಕದ್ದು.
9. ಸಾರ್ವಜನಿಕ ಉಪಯೋಗಕ್ಕಾಗಿ ನಿಗದಿ ಪಡಿಸಲ್ಪಟ್ಟ ನಿವೇಶನಗಳನ್ನು ಸಂಬಂಧಿತ ಪ್ರಾಧಿಕಾರಕ್ಕೆ ಹಸ್ತಾಂತರಿಸಿ ನೋಂದಾವಣೆ ಮಾಡಿಸಿಕೊಡತಕ್ಕದ್ದು.
10. ಬಡಾವಣೆ ರೂಪ ರೇಷೆಗೆ ಮತ್ತು ನಕ್ಷೆಗೆ ಅನುಮೋದನೆ ನೀಡುವ ಪ್ರಾಧಿಕಾರವು ಬಡಾವಣೆಯಲ್ಲಿ ಮೂಲಭೂತ ಸೌಕರ್ಯಗಳು ಪ್ರಾಧಿಕೃತ ನಿಯಮಗಳಿಗೆ ಅನುಗುಣವಾಗಿ ಇರುವ ಬಗ್ಗೆ ಮತ್ತು ಭೌತಿಕವಾಗಿ ಬಡಾವಣೆ ರಚನೆಯಾಗಿರುವ ಬಗ್ಗೆ ಖಚಿತ ಪಡಿಸಿಕೊಂಡು ನಿಯಮಗಳಂತೆ ಮಾರಾಟಕ್ಕೆ ನಿವೇಶನಗಳನ್ನು ಸದರಿ ಪ್ರಾಧಿಕಾರವು ಬಿಡುಗಡೆ ಪತ್ರ/ಅನುಮತಿ ಪತ್ರ ನೀಡತಕ್ಕದ್ದು. ಅನುಮತಿ ಪತ್ರವಿಲ್ಲದೇ ನಿವೇಶನ ಪರಭಾರೆ ನಿಷೇಧಿಸಿದೆ.
11. ಭೂ ಪರಿವರ್ತನಾ ಪತ್ರ, ಬಡಾವಣೆ ಅನುಮೋದನೆ ಪತ್ರ, ಅನುಮೋದಿತ ಬಡಾವಣೆ ನಕ್ಷೆ ಹಾಗೂ ಬಡಾವಣೆಯಲ್ಲಿ ಮೂಲಭೂತ ಸೌಕರ್ಯ ಶಾಸನಾತ್ಮಕವಾಗಿ ರಚನೆಯಾದ ಬಗ್ಗೆ ನೀಡಿದ ಪತ್ರಗಳನ್ನು ಹಾಜರ ಪಡಿಸಿ ನಿವೇಶನಗಳನ್ನು ನೋಂದಾವಣಿ ಮಾಡಿಸಿಕೊಳ್ಳತಕ್ಕದ್ದು.
12. **ಹೆಚ್ಚುವರಿ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಧಾರವಾಡ** ಇವರು ವಿಧಿಸಿದ ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.
13. ಪ್ರಸ್ತುತ ಜಮೀನನ್ನು **ವಸತಿ** ಉದ್ದೇಶಕ್ಕಾಗಿ ಆದೇಶದ ದಿನಾಂಕದಿಂದ ಎರಡು ವರ್ಷದೊಳಗಾಗಿ ಉಪಯೋಗಿಸತಕ್ಕದ್ದು. ಒಂದು ವೇಳೆ ಸದರ ಅವಧಿಯೊಳಗಾಗಿ ಪ್ರಸ್ತಾಪಿತ ಜಮೀನಿನಲ್ಲಿ ಅಭಿವೃದ್ಧಿ ಕಾರ್ಯ ಪೂರ್ಣಗೊಳಿಸಿ ಉಪಯೋಗಿಸಿಕೊಳ್ಳದೇ ಇದ್ದಲ್ಲಿ ಈ ಆದೇಶವು ತನ್ನಷ್ಟಕ್ಕೆ ತಾನೇ ಅಸಿಂಧುಗೊಳ್ಳುವುದು.
14. ಅ) ಸದರಿ ಜಮೀನಿನಲ್ಲಿ ನೈಸರ್ಗಿಕವಾಗಿ ನೀರು ಹರಿಯುವ ಮಾರ್ಗ ಇದ್ದಲ್ಲಿ, ಸದರಿ ನೀರು ಹರಿಯುವ (ಹಳ್ಳ, ನಾಲಾ, ಹೊಳೆ, ಝುರಿ ಹಾಗೂ ಇತರೆ) ಮಾರ್ಗಕ್ಕೆ ಯಾವುದೇ ಅಡೆತಡೆ ಮಾಡತಕ್ಕದ್ದಲ್ಲ ಹಾಗೂ ಹರಿಯ ಮಾರ್ಗವನ್ನು ಬದಲಾಯಿಸತಕ್ಕದ್ದಲ್ಲ. ಇದರ ಸಂಪೂರ್ಣ ಹಕ್ಕು ಸರಕಾರಕ್ಕೆ ಸೇರಿದ್ದಾಗಿರುತ್ತದೆ.

    ಬ) ಪ್ರಸ್ತಾಪಿತ ಜಮೀನಿನಲ್ಲಿ ಬರುವ ಬಂಡಿ ದಾರಿ, ಕಾಲು ದಾರಿ, ಹಳ್ಳಿ ರಸ್ತೆ ಮತ್ತು ಇತರೆ ಮಾರ್ಗಗಳನ್ನು ಬದಲಿಸತಕ್ಕದ್ದಲ್ಲ ಎಂಬ ವಿಷಯುವನ್ನು ಖಚಿತಪಡಿಸಿಕೊಂಡು ನಗರ ಯೋಜನಾ ಸಹಾಯಕ ನಿರ್ದೇಶಕರು ವಿನ್ಯಾಸವನ್ನು ರಚಿಸಬೇಕು.
15. ಈ ಆದೇಶದಂತೆ ಭೂ ಪರಿವರ್ತನೆ ಆದ ಕ್ಷೇತ್ರವನ್ನು ವಿಭಜನೆ, ತುಂಡು ಮಾಡಿ ಪೋಡಿ ಮಾಡಬಾರದು, ಹಾಗೆ ಮಾಡಿದ್ದಲ್ಲಿ ಈ ಆದೇಶ ರದ್ದು ಆದಂತೆ ಭಾವಿಸುವುದು. ಆದ್ದರಿಂದ ಭೂ ಪರಿವರ್ತನೆ ಆದ ಒಟ್ಟು ಕ್ಷೇತ್ರಕ್ಕೆ ವಿನ್ಯಾಸ ಅನುಮೋದನೆ ಪಡೆಯಬೇಕು.
16. ಅರ್ಜಿದಾರರು ಸಲ್ಲಿಸಿದ ಯಾವುದೇ ದಾಖಲೆಗಳು ತಪ್ಪಾಗಿದ್ದಲ್ಲಿ, ಭೂ ಪರಿವರ್ತನೆ ಆದೇಶವನ್ನು ನಿಯಮಾನುಸಾರ ರದ್ದುಗೊಳಿಸಲು ಕ್ರಮ ಜರುಗಿಸಲಾಗುವುದು.
17. **ಕ.ವಿ.ಪ್ರ.ನಿ.ನಿ.ಯ ಮಾರ್ಗ ಸುರಕ್ಷತೆ ಗ್ರೀಡ್ ಕೋಡ್ ಪ್ರಕಾರ ವಿದ್ಯುತ್ ಮಾರ್ಗಗಳ ಎರಡೂ ಬದಿಯಲ್ಲಿ 2.5ಮೀ. ನಂತೆ ಒಟ್ಟು 5ಮೀ.ನಷ್ಟು ಅಂತರವನ್ನು ಕಾಯ್ದಿರಿಸಬೇಕು ಹಾಗೂ ಮಾರ್ಗದ ಕೆಳಗಡೆ ಯಾವುದೇ ತರಹದ ನಿವೇಶನ ಕಟ್ಟಡಗಳನ್ನು ಅಥವಾ ಸಾರ್ವಜನಿಕರ ಉಪಯೋಗಕ್ಕಾಗಿ ಉದ್ಯಾನ,**

**ಧಾರ್ಮಿಕ ಕಟ್ಟಡ ಹಾಗೂ ಶಾಲೆಗಳಿಗಾಗಿ ಜಾಗವನ್ನು ಬಿಡಕೂಡದು.** ಒಂದು ವೇಳೆ ಸದರಿ ಮಾರ್ಗವನ್ನು **ಸ್ಥಳಾಂತರ ಮಾಡುವುದಾದರೆ "ಸ್ವಯಂ ಆರ್ಥಿಕ ಯೋಜನೆ" ಯಡಿಯಲ್ಲಿ** ಸ್ಥಳಾಂತರ **ಮಾಡಿಕೊಳ್ಳಬಹುದು.**

18. ಮೇಲ್ಕಂಡ ಯಾವುದೇ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಈ ಭೂ ಪರಿವರ್ತನೆ ಆದೇಶವನ್ನು ಯಾವುದೇ ಸೂಚನೆ ನೀಡದೇ ರದ್ದುಗೊಳಿಸಲಾಗುವುದು. ಮತ್ತು **ಕರ್ನಾಟಕ ಭೂ ಕಂದಾಯ ಕಾಯ್ದೆ, 1964** ರ ಕಲಂ **96** ರಂತೆ ದಂಡ ಶುಲ್ಕವನ್ನು ವಿಧಿಸಲು ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು. ಅಲ್ಲದೇ ಈ ಜಮೀನಿನಲ್ಲಿ ಅನಧಿಕೃತವಾಗಿ ಕಟ್ಟಿದ ಕಟ್ಟಡಗಳನ್ನು ಯಾವುದೇ ಪರಿಹಾರ ನೀಡದೇ ಕೆಡವಲು ಕ್ರಮ ತೆಗೆದುಕೊಳ್ಳಲಾಗುವುದು. ಹಾಗೂ ಅದಕ್ಕೆ ತಗಲುವ ವೆಚ್ಚವನ್ನು ಭೂ ಕಂದಾಯ ಬಾಕಿಯಂತೆ ಖಾತೆದಾರರಿಂದ ವಸೂಲಿ ಮಾಡಲಾಗುವುದು.

**ಷೆಡ್ಯೂಲ್** ವಿವರ

ಧಾರವಾಡ ಜಿಲ್ಲೆ, **ಹುಬ್ಬಳ್ಳಿ** ತಾಲೂಕು, **ಹುಬ್ಬಳ್ಳಿ** ಹೋಬಳಿ, **ರೇವಡಿಹಾಳ** ಗ್ರಾಮದ ಬ್ಲಾಕ್ ನಂಬರ: **90** ಕ್ಷೇತ್ರ **12ಎಕರೆ 30ಗುಂಟೆ 00ಆಣೆ ಪೈಕಿ (ಪೂರ್ವ ಭಾಗದ) ಕ್ಷೇತ್ರ 09ಎಕರೆ 30ಗುಂಟೆ 00ಆಣೆ** ವಿಸ್ತೀರ್ಣದ ವ್ಯವಸಾಯದ ಜಮೀನನ್ನು ವ್ಯವಸಾಯೇತರ **ವಸತಿ** ಉದ್ದೇಶಕ್ಕಾಗಿ ಭೂ ಪರಿವರ್ತಿತ ಜಮೀನಿನ ಚಕ್‌ಬಂದಿ:

| | |
|---|---|
| **ಪೂರ್ವಕ್ಕೆ** | **ಲಾಗೂ ಬ್ಲಾಕ ನಂಬರ 89 ಹಾಗೂ ರಸ್ತೆ.** |
| **ಪಶ್ಚಿಮಕ್ಕೆ** | **ಲಾಗೂ ಇದೇ ಜಮೀನಿನ ಬಾಕಿ ಕ್ಷೇತ್ರ** |
| **ಉತ್ತರಕ್ಕೆ** | **ಲಾಗೂ ಬ್ಲಾಕ ನಂಬರ 89.** |
| **ದಕ್ಷಿಣಕ್ಕೆ** | **ಲಾಗೂ ಬ್ಲಾಕ ನಂಬರ 91.** |

(ಡಾ:ಎಸ್.ಬಿ.ಬೊಮ್ಮನಹಳ್ಳಿ, ಭಾ.ಆ.ಸೇ)
ಜಿಲ್ಲಾಧಿಕಾರಿಗಳು ಧಾರವಾಡ

ಪ್ರತಿಗಳು:

1. ತಹಶೀಲದಾರ, **ಹುಬ್ಬಳ್ಳಿ** ಇವರಿಗೆ
   2/- ಈ ಆದೇಶದ ಪ್ರಕಾರ ಸಂಬಂಧಪಟ್ಟ ಬ್ಲಾಕ್ ನಂಬರ ಭೂ ಪರಿವರ್ತನೆಯಾಗಿದೆ ಎಂದು ಸಂಬಂಧಪಟ್ಟ ಆರ್.ಟಿ.ಸಿ.ಯಲ್ಲಿ ನಮೂದಿಸತಕ್ಕದ್ದು. ಮತ್ತು ಈ ಜಮೀನಿಗೆ ಖಾತೆದಾರರ ಲೆಕ್ಕದಲ್ಲಿ ಸದರಿ ಜಮೀನಿನ ಭೂ ಕಂದಾಯವನ್ನು ಕಡಿಮೆಗೊಳಿಸುವುದು
2. **ಹೆಚ್ಚುವರಿ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಧಾರವಾಡ** ಇವರಿಗೆ
3. **1)ಶ್ರೀಮತಿ ಪಾರವ್ವ ಕೋಂ ಕರಿಯಪ್ಪ ಮೇತ್ರಿ, 2)ಶ್ರೀಪರಸಪ್ಪ ತಂದೆ ಕರಿಯಪ್ಪ ಮೇತ್ರಿ 3) ಶ್ರೀ ದುರಗಪ್ಪ ತಂದೆ ಮಲ್ಲಪ್ಪ ಮೇತ್ರಿ, 4)ಶ್ರೀ ಫಕ್ಕೀರಪ್ಪ ತಂದೆ ಮಲ್ಲಪ್ಪ ಮೇತ್ರಿ 5) ಶ್ರೀ ಮಂಜುನಾಥ ತಂದೆ ಕರಿಯಪ್ಪ ಮೇತ್ರಿ, ಸಾ: ಹರಿಜನ ಓಣಿ, ರೇವಡಿಹಾಳ, ತಾ:ಹುಬ್ಬಳ್ಳಿ** ಇವರಿಗೆ

(ಇಬ್ರಾಹಿಂ ಮೈಗೂರ)
ಅಪರ ಜಿಲ್ಲಾಧಿಕಾರಿಗಳು,
ಧಾರವಾಡ ಜಿಲ್ಲೆ, ಧಾರವಾಡ